# ಎಲೀಷನ ವಿಧೇಯತೆ

✍ ಸುನಯನ ವಾಲ್ಟರ್ಸ್

**ಈ**ಜಬೆಲಳ ಬೆದರಿಕೆಗೆ ಅಂಜಿದ ಎಲೀಯನನ್ನು ದೇವರು ಅದ್ಭುತವಾಗಿ ಹೋರೇಬ್ ಬೆಟ್ಟದ ಗವಿಗೆ ನಡೆಸಿದನು. ಎಲ್ಲಾ ಪ್ರವಾದಿಗಳು ಸಂಹಾರವಾಗಿ *"ನಾನೊಬ್ಬನೇ ಉಳಿದು ನಿನ್ನ ಗೌರವವನ್ನು ಕಾಪಾಡುವುದರಲ್ಲಿ ಆಸಕ್ತನಾಗಿದ್ದೆನು"* ಎಂದು ವಿಜ್ಞಾಪಿಸಿ, ಪ್ರಾಣಭಯದಿಂದ ತತ್ತರಿಸಿದ್ದ ಆತನಿಗೆ ದೇವರು ದರ್ಶನಕೊಟ್ಟು ಹೇಳಿದ್ದು – *"ಎಲೀಷನನ್ನು ನಿನ್ನ ಬದಲಾಗಿ ಪ್ರವಾದಿಯಾಗಿ ಅಭಿಷೇಕಿಸು."*

ಎಲೀಷನು ಶ್ರೀಮಂತನಾಗಿದ್ದನು. ಎಲೀಯನು ಅವನನ್ನು ಕಂಡಾಗ ಅವನು ತನ್ನ ಹೊಲವನ್ನು ಉಳುವುದಕ್ಕೆ 12 ಜೋಡಿ ಎತ್ತುಗಳನ್ನು ತಂದು, 12ನೇ ಜೋಡಿಯಿಂದ ತಾನೇ ಉಳುತ್ತಿದ್ದನು. ಆ ಶ್ರೀಮಂತ ಮನುಷ್ಯನು ದೇವರ ಕರೆ ಬಂದ ಕೂಡಲೇ ಹಿಂದೆ ಮುಂದೆ ನೋಡಲಿಲ್ಲ. ಎಲೀಯನು ತನ್ನ ಕಂಬಳಿಯನ್ನು ಅವನ ಮೇಲೆ ಹಾಕಿದ ಕೂಡಲೇ ಅವನು ಉಳುವುದನ್ನು ಬಿಟ್ಟು ಓಡುತ್ತಾ ಅವನ ಬಳಿ ಬಂದನೆಂದು ಹೇಳಲಾಗಿದೆ. ಎಂತಹ ವಿಧೇಯತೆ! ಎಂತಹ ನಂಬಿಕೆ! ಶ್ರೀಮಂತನಾಗಿದ್ದ ಎಲೀಷನ ಕೈಕೆಳಗೆ ಬಹಳಷ್ಟು ಆಳುಗಳಿದ್ದಿರಬಹುದು. ಆದರೆ ಎಲ್ಲವನ್ನೂ ತ್ಯಜಿಸಿದ ಆತನು ಎಲೀಯನ ಆಳಾಗಿ, ಜೊತೆಗಾರನಾಗಿ ಹಿಂಬಾಲಕನಾಗಿ ಇರಲು ತೆರಳಿದನು. ಅವನ ಲೌಕಿಕ ಐಶ್ವರ್ಯವೆಲ್ಲಾ ಪರರ ಪಾಲಾಯಿತಾದರೂ ಅದಕ್ಕಿಂತ ಮಿಗಿಲಾದ ಪರಲೋಕದ ಐಶ್ವರ್ಯವನ್ನು ತಾನು ಪಡೆದಿದ್ದೇನೆಂದು ಅವನಿಗೆ ತಿಳಿದಿತ್ತು (1 ಅರಸು 19 ಓದಿರಿ).

ಈ ರೀತಿಯ ನಂಬಿಕೆ, ವಿಧೇಯತೆಗಳನ್ನು ನಾವು ಹೊಸ ಒಡಂಬಡಿಕೆಯಲ್ಲಿ ಹೇಳಿದಂತೆ ಯೇಸುವಿನ ಪ್ರಥಮ ಶಿಷ್ಯರಲ್ಲಿಯೂ ಕಂಡಿದ್ದೇವೆ. ಸೀಮೋನ, ಅಂದ್ರೆಯ, ಯಾಕೋಬ, ಯೋಹಾನ – ಇವರೆಲ್ಲರೂ ಯೇಸುಸ್ವಾಮಿಯು ಕರೆದ ಕೂಡಲೇ ತಮ್ಮ ಬಲೆಗಳನ್ನೂ, ದೋಣಿಯನ್ನೂ ಅಲ್ಲೇ ಬಿಟ್ಟು ಆತನನ್ನು ಹಿಂಬಾಲಿಸಿದರು (ಮಾರ್ಕ 1:16–20). ಈ ವಿಧೇಯತೆ, ವಿಶ್ವಾಸ, ಕಾರ್ಯಗಳಿಗಾಗಿ ಅವರಿಗೆ ಸಿಕ್ಕಿದ ಐಶ್ವರ್ಯವೇನು? ಯೇಸು ಶ್ರಮೆ ಅನುಭವಿಸುವುದಕ್ಕಿಂತ ಮುಂಚೆ ಶಿಷ್ಯರಿಗೆ ಹೇಳಿದ ಕಡೇ ಮಾತುಗಳಲ್ಲಿ ಇತ್ತ ಭರವಸೆ – *"ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧ ಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರೆದುಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು."*

ಎಲೀಯನು ತನ್ನ ಶಿಷ್ಯನಾದ ಎಲೀಷನನ್ನು ಬಿಟ್ಟು ಹೋಗುವ ಕಾಲ ಬಂದಾಗ ಎಲೀಯನು ಕೇಳಿದ ದೊಡ್ಡ ಪ್ರಶ್ನೆ – *"ನಾನು ನಿನಗೋಸ್ಕರ ಏನು ಮಾಡಬೇಕೆನ್ನುತ್ತಿ?"* ಎಲೀಷನು ಧನಕನಕವನ್ನು ಕೇಳಲಿಲ್ಲ. ಆರೋಗ್ಯ, ದೀರ್ಘಾಯುಷ್ಯ ಕೇಳಲಿಲ್ಲ. ಅವನು ಕೇಳಿದ್ದು, *"ನಿನಗಿರುವ ಆತ್ಮದಲ್ಲಿ ನನಗೆ ಎರಡು ಪಾಲನ್ನು ಅನುಗ್ರಹಿಸು". "ಅದು ದುರ್ಲಭವಾದದ್ದು"* ಎಂದು ಎಲೀಯನು ಹೇಳಿದರೂ ತಾನು ಪರಲೋಕಕ್ಕೆ ಎತ್ತಲ್ಪಡುವಾಗ ಅದನ್ನು ಎಲೀಷನು ಕಾಣಬಲ್ಲವನಾದರೆ ಆ ವರವು ದೊರೆಯುವುದು ಎಂದು ಹೇಳಿದನು. ಹಾಗೆಯೇ ಅಗ್ನಿಮಯವಾದ ರಥರಥಾಶ್ವಗಳೊಡನೆ ಎಲೀಯನು ಸುಳಿಗಾಳಿಯ ಮೂಲಕ ಪರಲೋಕಕ್ಕೆ ಹೋಗುವ ದೃಶ್ಯವನ್ನು ಕಂಡು ಕೃತಾರ್ಥನಾದ ಎಲೀಷನು ಮೇಲಿನಿಂದ ಬಿದ್ದ ಎಲೀಯನ ಕಂಬಳಿಯನ್ನು ಪಡೆದನು. ಎಲೀಯನಿಗಿದ್ದ ಆತ್ಮವು ಎಲೀಷನಿಗೆ ಬಂದುದನ್ನು ಪ್ರವಾದಿಮಂಡಲಿಯವರು ಕಂಡುಕೊಂಡು ಆತನಿಗೆ ಸಾಷ್ಟಾಂಗವೆರಗಿದರು (2

ಅರಸು 2:11–16).

ಮುಂದೆ ಮಹಾಪ್ರವಾದಿಯಾದ ಎಲೀಷನು ಎಲೀಯನಿಗಿಂತಲೂ ಹೆಚ್ಚಿನದೆನ್ನಬಹುದಾದ ಮಹತ್ಕಾರ್ಯಗಳನ್ನು ಮಾಡಿದನು.

ಯೆರಿಕೋವಿನ ಜನರು ಎಲೀಷನು ತಡೆದರೂ ಕೇಳದೆ ಅವರಲ್ಲಿ 50 ಮಂದಿ ಎಲೀಯನನ್ನು ಹುಡುಕಲು ಹೋಗಿ 3 ದಿನದ ನಂತರ ನಿರಾಶರಾಗಿ ಹಿಂತಿರುಗಿದರು. ಪ್ರಭುವಾದ ಯೇಸುಸ್ವಾಮಿಯು ತಿರಿಗಿ ಬಂದು ವಿಶ್ವಾಸಿಗಳನ್ನು ಕರೆದೊಯ್ದಾಗ, ಯಾವುದೇ ಹುಡುಕಾಟದಿಂದ ಪ್ರಯೋಜನವಿಲ್ಲ. ಅವರೆಲ್ಲರೂ ಮೇಲಕ್ಕೆತ್ತಲ್ಪಟ್ಟ ಕೂಡಲೇ ಅನುಗ್ರಹದ ಬಾಗಲು ಮುಚ್ಚಲ್ಪಡುವುದು. ಅನುಗ್ರಹದ ಬಾಗಲು ತೆರೆದಿರುವ ಈ ಸಮಯದಲ್ಲೇ ನಾವು ದೇವರ ಸುವಾರ್ತೆಗೆ ಓಗೊಡಬೇಕಲ್ಲವೇ? ■